ಪಾಠ–11 ಸೆಪ್ಟೆಂಬರ್ 8–14

# ಯೆರೂಸಲೇಮ್‌ನಲ್ಲಿ ತಡೆ



## ಸಬ್ಬತ್ತಿನ ಮಧ್ಯಾಹ್ನ

**ಈ ವಾರದ ಪಾಠದ ಅಧ್ಯಯನಕ್ಕಾಗಿ ಅ.ಕೃತ್ಯಗಳು 21, 22ನೇ ಅಧ್ಯಾಯ ರೋಮಾಪುರದವರಿಗೆ 2:28, 29 ಗಲಾತ್ಯ 5:6; ಅ.ಕೃತ್ಯಗಳು 23:1; ಮತ್ತಾಯ 22:23–32.**

**ಸ್ಮರಣವಾಕ್ಯ : "ಆ ದಿನದ ರಾತ್ರಿ ಕರ್ತನು ಪೌಲನ ಬಳಿಯಲ್ಲಿ ನಿಂತುಕೊಂಡು – ಧೈರ್ಯದಿಂದಿರು; ನೀನು ಯ–ೆರೂಸಲೇಮಿನಲ್ಲಿ ನನ್ನ ಸಂಗತಿಗಳನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿಹೇಳಬೇಕಾಗುವುದು ಅಂದನು ಅ.ಕೃತ್ಯಗಳು 23:11.**

ಪೌಲನು ಪ್ರಥಮ ಪ್ರಯಾಣದ ನಂತರ ಸಭೆಯಲ್ಲಿ ಅನ್ಯರನ್ನು ವಿಶ್ವಾಸಕ್ಕೆ ಸೇರಿಸಿಕೊಳ್ಳುವುದರಲ್ಲಿ ಆಧಾರಭೂತವಾದ ವೈಮನಸ್ಸು ಉಂಟಾದದ್ದು ಬಹಳ ಸ್ವಷ್ಟವಾಗಿ ಕಂಡುಬಂದಿತು *(ಅ.ಕೃತ್ಯಗಳು 15:1–5).* ಅಸಮದಾನದ ಮನಸ್ಸನ್ನು ಕಂಡು ಪೌಲನು ಅನ್ಯೋನ್ಯತೆಯನ್ನು ಮೂಡಿಸಲು ಬಂದು ಉಪಾಯ ಹೊಳೆಯಿತು. ಅದೇನೆಂದರೆ ಮಂಡಳಿಯಲ್ಲಿ ಬಡವನ್ನು ಜ್ಞಾಪದಲ್ಲಿಟ್ಟು ಕೊಳ್ಳಬೇಕೆಂದು ಪ್ರಸ್ತಾಪವಾಗಿತ್ತು *(ಗಲಾತ್ಯ 2:10).* ಆದುದರಿಂದ ಅನ್ಯಸಭೆಯವರಿಂದ ಹಣ ವಸಲಿಮಾಡಿ "ಯೂದಾಯದಲ್ಲಿರುವ ಸಹೋದರರಿಗೆ" ಕೂಡಿಸಬೇಕೆಂದು ತೀರ್ಮಾನಿಸಿದನು 1 ಕೊರಿಂಥ 16:1. ಇದರ ಮುಖಾಂತರ ಎರಡು ಗುಂಪುಗಳ ಮಧ್ಯೆ ಸೇತುವೆ ಕಟ್ಟಲು ಬಯಸಿದ್ದರು.

ಯೆರೂಸಲೇಮ್‌ಗೆ ಮೂರನೆ ಸುವಾರ್ತಾ ಪ್ರಯಾಣ ನಿಶ್ಚಯವಾಗಿರುವುದನ್ನು ತಿಳಿಸುತ್ತದೆ, ಗಂಡಾಂತರದ ಮಧ್ಯೆ. ಒಂದು ಕಡೆ ಯೆಹೂದ್ಯರ ಮೇಲೆ ಪ್ರೀತಿ *(ರೋಮಾಯ 6:1–5).* ಯೆಹೂದ್ಯರು ಮತ್ತು ಅನ್ಯರು ಕ್ರಿಯೆಗಳಿಂದಲ್ಲ ನಂಬಿಕೆಯಿಂದಲೆ ರಕ್ಷಣೆಯನ್ನು ಹೊಂದುವರು ಮತ್ತು ಅವರ ಸಂಸ್ಕಾರಗಳು ಸಮಾಜಿಕ ಪರಾಧೀನವಾಗುವುದು ಸುವಾರ್ತೆಗೆ ವಿರುದ್ಧವಾದದ್ದಾಗಿತ್ತು *(ಎಫೆಸದವರಿಗೆ 2:11–22).*

ಪೌಲನ ಹೊಸಜೀವಿತ ಮತ್ತು ಉದ್ದೇಶದ ಕಡೆಗೆ ಗಮನ ಹರಿಸೋಣ.

ಭಾನುವಾರ ಸೆಪ್ಟೆಂಬರ್, 9

## ಯೆರೂಸಲೇಮ್ ನಾಯಕರ ಜೊತೆ ಸಭೆ

ಪೌಲನು ಯೆರೂಸಲೇಮಿಗೆ ಬಂದಾಗ ಮ್ನಾಸೋನೆಂಬುವನ ಶಿಷ್ಯರು ಮತ್ತು ಆತನ ಮನೆಯಲ್ಲಿ ಇಳುಕೊಳ್ಳಲಿರುವ ಪೌಲನನ್ನು ಬರಮಾಡಿಕೊಂಡರು *(ಅ.ಕೃ. 21:16–1).*

ಅ.ಕೃ. 21:18–22 ಸ್ಥಳೀಯ ಯೆಹೂದಿ ನಂಬಿಗಸ್ತರಲ್ಲಿಗೆ ಯಾಕೋಬನು ಮತ್ತು ಯೆರೂಸಲೇಮನ ಹಿರಿಯರು ಪೌಲನ ಪ್ರಖ್ಯಾತಿಯ ಬಗ್ಗೆ ವಿವರಿಸಿದರು. ಅವರಿಗೆ ತಿಳಿದ ಪ್ರಕಾರ ಪೌಲನು ಯೆಹೂದಿಗಳಿಂದ ಪರಿವರ್ತನೆಗೊಂಡವರಿಗೆ ಮೊಸೆಯ

ನಿಯಮದ ಪ್ರಕಾರ ಮಕ್ಕಳಿಗೆ ಸುನ್ನತಿ ಮಾಡಿಸಬಾರದೆಂತಲೂ ಮತ್ತು ಸಂಸ್ಕಾರಗಳನ್ನು ಅನುಸರಿಸಬಾರದೆಂದು ಪಾಠ ಮಾಡುತ್ತಾನೆಂದು ತಿಳಿದುಕೊಂಡರು.

ಅವರಿಗೆ ತಿಳಿದುಬಂದ ಪ್ರಕಾರ ಅದು ಸತ್ಯವಾಗಿರಲಿಲ್ಲ. ಪೌಲನು ರಕ್ಷಣೆಯ ಪಾಠ ಬಗ್ಗೆ ಮಾಡಿಸಿದ್ದೇನಂದರೆ, ಸುನ್ನತಿ ಆಗಲಿ ಸುನ್ನತಿ ಇಲ್ಲದವನಾಗಲಿ ಏನು ಪ್ರಯೋಜನವಿಲ್ಲ. ಅನ್ಯನಾಗಲಿ ಯೆಹೂದ್ಯನಾಗಲಿ ಕ್ರಿಸ್ತನ ನಂಬಿಕೆಯಿಂದಲೇ ರಕ್ಷಿಸಲ್ಪಡುವನು *(ರೋಮಾ 2:28, 29; ಗಲಾತ್ಯ 5:6, ಕೊಲೊಸ್ಸೆ 3:11).*

**ಅ.ಕೃತ್ಯಗಳು 21:23–26 ಪೌಲನು ಹೇಗೆ ನಂಬಿಗಸ್ತನಾದ ಯೆಹೂದಿ ಎಂದು ಸಿದ್ಧಾಂತಪಡಿಸಬಲ್ಲನು?**

____________________________________________

____________________________________________

ಪೌಲನು ರಾಜಕೀಯವಾಗಿ ಸರಿ ಎಂದು ಸಲಹೆ ಮಾಡಲಾಗಿತ್ತು. ಆತನು ಯೆಹೂದಿ ಎಂಬ ವದಂತಿ ಸರಿ ಎಂದು ಯಾವುದಾದರೊಂದು ಕಾರ್ಯ ಮಾಡಬೇಕಿತ್ತು. ಈ ಪ್ರಮಾಣವು ಆತನು ಭಕ್ತಿವಂತನೆಂದು ಮತ್ತು ದೇವರಿಗೆ ಪ್ರತಿಷ್ಠನಾಗಿರುವನೆಂದು ತಿಳಿಯುತ್ತವೆ.

ಸತ್ಯವೇದದ ವೀರರಾದ ಅಬ್ರಹಾಮ ಮೋಶೆ ಪೇತ್ರ ಮತ್ತು ಇತರರಂತೆ ರೋಷಿಯಾದನು. ಯೆಹೂದಿಗಳ ಒಡನಾಟದಲ್ಲಿ, ಯೆಹೂದಿಯಂತೆ ವರ್ತಿಸಿದನು *(1 ಕೊರಿಂಥ 9:19–23).*

ಪೌಲನ ಜೀವಿತದಲ್ಲಿ ಮಾಡಿದ ಪ್ರಮಾಣದ ಪ್ರಯುಕ್ತ ತಾನು ನ್ಯಾಯವಾದಿ ಎಂದು ಸ್ಪಷ್ಟವಾಗಿ ತಿಳಿದಿಲ್ಲ *(ಅ.ಕೃ. 18:18)* ಎರಡು ಸುವಾರ್ತೆಗಳು ಇವೆಯೆಂದು ತಿಳಿದುಬರುತ್ತದೆ ಒಂದು ಅನ್ಯರಿಗೆ ನಂಬಿಕೆಯಿಂದ ರಕ್ಷಣೆ ಮತ್ತೊಂದು ಯ–ೆಹೂದ್ಯರಿಗೆ ಕ್ರಿಯೆಗಳಿಂದ ರಕ್ಷಣೆ.

ಪೌಲನು ದೇವರಿಂದ ಕೇಳಿದ್ದನ್ನು ಪಡೆಯುವುದಕ್ಕೆ ಪರಿವಾನಿಗೆ ಪಡೆದಿರಲಿಲ್ಲ. ಎಲನ್ ಜಿ ವೈಟ್ *ದಿ ಎಕ್ಸ್ ಆಫ್ ದಿ ಅಪೋಸ್ತಲ್ಸ್* ಪುಟ 405.

**ಸೋಮವಾರ** **ಸೆಪ್ಟೆಂಬರ್, 10**

## ದೇವಾಲಯದಲ್ಲಿ (ಗಲಭೆ) ದಾಂಧಲೆ

ಸಭಾ ನಾಯಕರ ಸಲಹೆಯನ್ನು ಒಪ್ಪಿಕೊಂಡನಂತರ ಪೌಲನು ಏಳು ದಿನದ ಶುದ್ಧೀಕರಣದ ಸಂಸ್ಕಾರದಲ್ಲಿ ಭಾಗವಹಿಸಿ ಪ್ರಮಾಣದ ಪರಿಪೂರ್ಣ ಅಂತ್ಯವಾದಂತೆ *(ಅರಣ್ಯಕಾಂಡ 19:11–13).* ಅದೇ ಸಂದರ್ಭದಲ್ಲಿ ಯೆಹೂದ್ಯ ಸಂಪ್ರದಾಯದಂತೆ ಅನ್ಯನು ಅಶುದ್ಧನು. ಆದುದರಿಂದ ದೇವಾಲಯದೊಳಗೆ ಪ್ರವೇಶವಿಲ್ಲ ಅದಕೋಸ್ಕರ ಪೌಲನು ದೇವಾಲಯದೊಳಗೆ ಪ್ರವೇಶಿಸಬೇಕಾದರೆ ಶುದ್ಧನು ಎಂದು ಯಾಜಕರ ಮುಂದೆ ನಜಕೀತಿನವನೆಂದು ಪ್ರಮಾಣೀಕರಿಸ– ಬೇಕಾಗಿತ್ತು. ಅಧ್ಯಯನಕ್ಕಾಗಿ ಓದಿರಿ *(ಅ.ಕೃ. 21:27–36).*

ಪೌಲನ ಮೇಲೆ ದಾಂಧಲೆ ಮೂಡಿಸಲು ನೆರೆದ ಗುಂಪಿನಿಂದ ಪ್ರಚೋದನೆ ಉಂಟಾಯಿತು. ಆತನು ಯೆಹೂದ್ಯರ ಬಹುಮುಖ್ಯವಾದ ಪವಿತ್ರಸ್ಥಳವನ್ನು ಹೊಲೆ ಮಾಡಿದ್ದಾನೆಂದು ಅಪಾದಿಸಿದರು. ಪೌಲನು ಪ್ರಯಾಣದ ಜೊತೆಗಾರನು ಅನ್ಯನಾಗಿದ್ದನು. ಆತನು ಎಫೆಸ ಪಟ್ಟಣದ ತ್ರೋಫಿಮನು *(ಅ.ಕೃ. 21:39).* ಜನರು ಭಾವಿಸಿದ್ದೇನೆಂದರೆ ಅಪೋಸ್ತಲನು ತನ್ನ ಸಂಗಡಿಗನನ್ನು ದೇವಾಲಯದ ಗರ್ಭಗುಡಿಯಲ್ಲಿ ಕರೆದುಕೊಂಡು ಬಂದಿದ್ದರಿಂದ ಯೆಹೂದಿಗಳನ್ನು ಹೊರತು ಪಡಿಸಿ ಮತ್ತಾರಿಗೂ ಪ್ರವೇಶವಿರಲಿಲ್ಲ. ಗೋಡೆಗಳ ಹೊರಭಾಗದಲ್ಲಿ ಮತ್ತು ಒಳಭಾಗದಲ್ಲಿ ಗ್ರೀಕ್ ಮತ್ತು ಲಾಟಿನ್ ಭಾಷೆಯಲ್ಲಿ ಎಚ್ಚರಿಕೆ ಪದಗಳು ಬಳಸಲಾಗಿತ್ತು. ಅನ್ಯರು ಒಳಭಾಗಕ್ಕೆ ಪ್ರವೇಶಿಸಿದರೆ ಅವರ ಸಾವಿಗೆ ಅವರೇ ಜವಾಬ್ದಾರರಾಗಿದ್ದರು. "ಯೆಹೂದಿಗಳ ನಿಯಮದ ಪ್ರಕಾರ ಸುನ್ನತಿಯಿಲ್ಲದವನು ಗರ್ಭಗುಡಿಯಲ್ಲಿ ಪ್ರವೇಶಿಸಿದರೆ ಅದು ಮಹಾ ಅಪರಾಧ, ಸಾವೇ ಅವರ ಗತಿ. ಪೌಲನು ತನ್ನ ಜೊತೆಗಾರನಾದ ತ್ರೊಫಿಮನನ್ನು ದೇವಾಲಯದ ಗರ್ಭಗುಡಿಯಲ್ಲಿ ಕಂಡರೆನ್ನುವ ಕಾರಣಕ್ಕೆ, ಅದನ್ನು ನಿಜವಾಗಿಯೂ ಆತನು ಮಾಡಿರಲಿಲ್ಲ. ಆತನೇ ಯೆಹೂದಿಯಾಗಿ ಹೀಗೆ ಮಾಡಬಹುದೆಂದು ಪ್ರಶ್ನಿಸಿದರು. ಜನರು ಹೊರಿಸಿದ ಅಪವಾದ ತಪ್ಪಾಗಿದ್ದರು. ತಮ್ಮ ದುರ್ವಿಣಯದಿಂದ ದಾಂಧಲೆ ಪ್ರಾರಂಭಿಸಿದರು. ಜನರ ಕೂಗು ದೇವಾಲಯದ

ಅಂಗಳಗಳಿಗೂ ಬಂದಿಂದ ಕಾರಣ, ನಿಂತಿದ್ದ ಗುಂಪು ಪ್ರೇರೇಪಣೆಗೆ ಗುರಿಯಾದರು. ***ಎಲನ್ ಜಿ ವೈಟ್, ದಿ ಯಾಕ್ಸ್ ಆಫ್ ದಿ ಅಪೋಸ್ತಲ್ಸ್* ಪುಟ 407**.

ಈ ದಾಂಧಲೆಯು ರೋಮನ್ನರ ಕೋಟೆಯವರಿಗೆ ತಿಳಿದುಬಂದಾಗ, ರೋಮನ್ನರ "ಫೌಜಿನ" ಅಧಿಪತಿ ಕ್ಲೊಡಿಯಸ್ ಲಿಸೆಯಸ್ *(ಅ.ಕೃ. 21:31, 32, 23:26)*. ತನ್ನ ಸೈನ್ಯದೊಡನೆ ಬಂದು ಪೌಲನನ್ನು ಕೊಲ್ಲುವುದಕ್ಕೆ ಮೊದಲೆ ಆತನನ್ನು ರಕ್ಷಿಸಿದರು (ಪಾರುಮಾಡಿದರು).

ಪೌಲನು (ಈ ಕಾರಣಕ್ಕೆ) ಗುರಿಯಾಗಿರುವನೆಂದು ತಿಳಿದ ಅಧಿಕಾರಿ ಆತನನ್ನು ಸರಪಣಿಗಳಿಂದ ಬಂಧಿಸಬೇಕೆಂದು ಅಪ್ಪಣೆಕೊಟ್ಟನು. ಜನರ ಕೂಗು ಹೆಚ್ಚಾಗುತ್ತಿದ್ದರಿಂದ ಪೌಲನನ್ನು ಕೋಟೆಯೊಳಗೆ ಕರಕೊಂಡು ಹೋಗಿರೆಂದು ಅಪ್ಪಣೆ ಕೊಟ್ಟನು.

**ಮಂಗಳವಾರ** **ಸೆಪ್ಟೆಂಬರ್, 11**

## ಗುಂಪು ಗುಂಪಿನ ಮುಂದೆ

*(ಅ.ಕೃ. 21:37–40)* ಮುಂದೆ ಏನಾಯಿತೆಂದು ತಿಳಿಸುತ್ತದೆ. ಪೌಲನನ್ನು ರೋಮನ್ನರ ಕೋಟೆಯೊಳಗೆ ವಿಚಾರಿಸಲು ತೊಡಗಿದಾಗ ಮತಭ್ರಾಂತರಾಗಿರುವ ಜನರನ್ನು ಉದ್ದೇಶಿಸಿ ಮಾತನಾಡಲು ಅಧಿಕಾರಿಯಿಂದ ಅಪ್ಪಣೆ ಪಡೆದನು. ಪೌಲನು ಜನರನ್ನು ಉದ್ದೇಶಿಸಿ ಮಾತಾಡುತ್ತಿರುವಾಗ ರೋಮನ್ ಅಧಿಕಾರಿ ಗ್ರೀಕ್ ಭಾಷೆಯಲ್ಲಿ "ಪೌಲನು ಮೂರು ವರ್ಷಗಳ ಹಿಂದೆ ಯೆರೂಸಲೇಮಿನಲ್ಲಿ ರೋಮನ್ನರ ವಿರುದ್ಧ ದಂಗೆ ಎಬ್ಬಿಸಿ ಪ್ರೋತ್ಸಾಹ ನೀಡಿರುವದನ್ನು ಮತ್ತು ಆತನು ಐಗುಪ್ತದಿಂದ ಬಂದಿರುವ ಯೆಹೂದಿಯೆಂದು ಗುರುತಿಸಿದನು". ಈ ದಾಂಧಲೆಯನ್ನು ರೋಮನ್ನರು ಶಮನಗೊಳಿಸಿದರು ಆದರೂ ಆತನ ಹಿಂಬಾಲಕರು ಸತ್ತರು ಹಾಗೂ ಐಗುಪ್ತನು ತಪ್ಪಿಸಿಕೊಂಡನು.

ನಾನು ತಾರ್ಸಿಸ್‌ನವನು ಐಗುಪ್ತನವನಲ್ಲವೆಂದು ಹೇಳಿದಾಗ, ಅಧಿಕಾರಿ ಗುಂಪನ್ನು ಉದ್ದೇಶಿಸಿ ಮಾತಾಡಲು ಅಪ್ಪಣೆಕೊಟ್ಟನು. ನಂತರ ತನ್ನ ಮಾತುಗಳಲ್ಲಿ ಆತನ ಮೇಲೆ ಹೊರಿಸಿರುವ ಅಪಾದನೆಗಳ ಬಗ್ಗೆ ಮಾತಾಡಲಿಲ್ಲ *(ಅ.ಕೃ. 21:28)*. ಆದರೆ ಆತನು ಪರಿವತನೆ ಮತ್ತು ಹಿಡಿಪೆಗಳ ಬಗ್ಗೆ ವಿವರಗಳನ್ನು ತಿಳಿಸಿ, ಯೆಹೂದಿಗಳ (ಅಭಿಮಾನಿಯಂದು) ಭಕ್ತಿವಂತನೆಂದು ತಿಳಿಸಿದ, ಮತ್ತು ತನ್ನ ಮಾರ್ಪಟನಿ ಬಗ್ಗೆ ತಿಳಿಸಿ ಸಭೆಯ ಹಿಂಸಿಸುವನಾಗಿದು, ಈಗ ಅನ್ಯರಿಗೆ ಸುವಾರ್ತಿಕನಾಗಿದ್ದೆನೆಂದು ಒಪ್ಪಿಕೊಂಡನು.

**ಓದಿ ಅ.ಕೃ. 22:22–29 ನಾನು ಅನ್ಯರಿಗೆ ಅಪೋಸ್ತಲನಾಗಿದ್ದೇನೆಂದು ಹೇಳಿದ್ದಕ್ಕೆ ಸಮೋಹ ಪ್ರತ್ಯುತ್ತರಿಸಿದರು?**

____________________________________________________________

____________________________________________________________

ಜನರನ್ನು ಉದ್ದೇಶಿಸಿ ಮಾತಾಡಲು ಯೋಚಿಸಿದ ತೀರ್ಮಾನ ಯಾವ ಪ್ರಯೋಜನವಾಗಲಿಲ್ಲ. ಪೌಲನು ಮೇಲೆ ಹೊರಿಸಿದ ಅಪಾದನೆಗಳನ್ನು ತಲ್ಲಣಗೊಳಿಸಿ, ಇನ್ನೊಂದು ಜನರು ತಿರುಗಿ ಬೀಳದಂತೆ ಮಾಡಿದನು *(ಅ.ಕೃ. 21:28)*.

ಪೌಲನು ಹೇಳಿದಂತೆ ಎಲ್ಲಾ ಮಾತುಗಳನ್ನು ರೋಮನ್ನಿನ ಅಧಿಕಾರಿ ಅರ್ಥ ಮಾಡಿಕೊಳ್ಳಲಾಗದಿದ್ದರು. ಆತನನ್ನು ಪ್ರಶ್ನಿಸಿ ಕೊರಡೆಗಳಿಂದ ಹೊಡೆದು. ಈತನು ಶುದ್ಧ ಯೆಹೂದಿ ಎಂದು ಒಪ್ಪಿಕೊಂಡನು *(ಫಿಲಿಪ್ಪಿ 3:5)*. ಪೌಲನಿಗೆ ರೋಮನ್ ನಗರವಾಸಿ ಹಕ್ಕದಾರನಾಗಿದ್ದ ಈ ವಿಷಯವನ್ನು ತಿಳಿದ ಅಧಿಕಾರಿ ಪೌಲನಿಗೆ ನೀಡುವ ಶಿಕ್ಷೆಯನ್ನು ಹಿಂತೆಗೆದುಕೊಂಡನು. ಅಧ್ಯಯನಕ್ಕಾಗಿ ಓದಿರಿ *(ಅ.ಕೃ. 22:1–21)*.

**ಬುಧವಾರ** **ಸೆಪ್ಟೆಂಬರ್, 12**

## (ಯೆಹೂದ್ಯರ ಮಂತ್ರಿ ಸಭೆಯ್ ಮುಂದೆ) ಹಿರೀ ಸಭೆಯವರ ಮುಂದೆ

ಪೌಲನು ರೋಮನ್ ಸಾಮ್ರಾಜ್ಯಕ್ಕೆ ಯಾವ ಕೆಡುಕನ್ನು ಮಾಡದವನೆಂದು ತಿಳಿದ ಸಹಸ್ರಾಧಿಪತಿಯು, ಇದು ಯೆಹೂದ್ಯರಲ್ಲಿರು ಆಂತರಿಕ ಸಮಸ್ಯೆ ಎಂದು ತಿಳಿದು ಯೆಹೂದ್ಯ ಹಿರೀಸಭೆಯವರಿಗೆ ಈ ವಿಚಾರವನ್ನು ಒಪ್ಪಿಸಿ ಬಿಡು ಎಂದು ಸಹಸ್ರಾಧಿಪತಿಯು ಹೇಳಿದನು *(ಅ.ಕೃ. 23:30–23:39).* ಅಧ್ಯಯನಕ್ಕಾಗಿ

**ಅ.ಕೃ. 23:1–5 ಹಿರೀಸಭೆಯವರ ಮುಂದೆ ಹೇಗೆ ತನ್ನನ್ನು ತಾನು ಎದುರಿಸಿಕೊಂಡ?**

___________________________________________

___________________________________________

ಪೌಲನು ಆರಂಭಿಕ ಹೇಳಿಕೆಯಲ್ಲಿ ಸೆರೆಯಾಳಾಗಿ ದೇವರ ಹೆಸರನ್ನು ಹೇಳುವುದು ದೇವರ ದೂಷಣೆಯಾದು ತಿಳಿದು ಮಹಾಯಾಜಕನಾದ ಅವನಿಯನು. ಆತನ ಬಾಯಿ ಮೇಲೆ ಹೊಡೆಯಿರಿ ಎಂದನು "ನೀನು ಸುಣ್ಣ ಹಚ್ಚಿದ ಗೋಡೆಯೆ" ಎಂದು ಈತನು ಯೇಸು ಹೇಳಿದ "ಕಪಟಿಗಳಾದ ಶಾಸ್ತ್ರಿಗಳುತ್ತಿದ್ದಾನೆಂದು" ಹೇಳಿದನು. ಆತನು ಮಹಾಯಾಜಕನನ್ನುದ್ದೇಶಿಸಿ ಮಾತಾಡುತ್ತಾನೆಂದು ಅರಿಯದಿದ್ದನು. ಅಂದರೆ ಕಣ್ಣುಗಳು ಮೊಬ್ಬಾಗಿರಬಹುದು ಅಲ್ಲಗಳೆಯಬಾರದು.

**ಓದಿರಿ ಅ.ಕೃ. 23:6–10 ಪೌಲನು ಹೇಗೆ ಈ ಕಾರ್ಯಗಳ ಅಡ್ಡಿಪಡಿಸುವಂತಾದನು?**

___________________________________________

___________________________________________

ಹಿರೀಸಭೆಯವರಲ್ಲಿ ಪರಿಸಾಯರು ಸದ್ದುಕಾಯರನ್ನು ಒಳಗೊಂಡಿತ್ತು. ಅನೇಕ ವಿಷಯಗಳಲ್ಲಿ ಇವರು ಒಪ್ಪಿಕೊಳ್ಳುವಂತಿರಲಿಲ್ಲ. ಸದ್ದುಕಾಯರು ಮೋಶೆ ಬರೆದ ಐದು ಪುಸ್ತಕಗಳನ್ನು ಒಪ್ಪಿಕೊಂಡರು. ಆದರೆ ಸತ್ತವರು ಪುನರುತ್ಥಾನವನ್ನು ಹೊಂದುತ್ತಾರೆಂದು ನಂಬುವುದಿಲ್ಲ *(ಮತ್ತಾಯ 22:23–32).*

ಪೌಲನು ಬಹಳ ಬುದ್ಧಿವಂತಿಕೆಯಿಂದ ಮಹಾಸಭೆಯನ್ನು ಗಾಬರಿ ಪಡಿಸುವಂತಾದನು. ಆದರೂ ಸತ್ತವರೊಳಗಿಂದ ಎದ್ದು ಬಂದ ಯೇಸುಕ್ರಿಸ್ತನ ಮುಖಾಂತರವೆ ಆತನು ಸಮಸ್ತ ಪಟ್ಟಣದ ಹಾದಿಯಲ್ಲಿ ಪರಿವರ್ತನೆಗೊಂಡೆನೆಂದು ಸಾಕ್ಷಿ ಹೇಳಿದನು. ಈ ವಿಷಯವು ಆತನ ಸೇವೆಯ ಬುನಾದಿಯಾಗಿತ್ತು *(ಅ.ಕೃ. 24:20, 21: 26–6–8).*

ಈ ಉತ್ಸುಕತೆ ನನ್ನನ್ನು ಬದಲು ಮಾಡಿದೆ ಎಂದು ಹೇಳುವುದನ್ನು ಬಿಟ್ಟರೆ ಮತ್ತೊಂದು ವಿಷಯವೇನು ಅವಶ್ಯವಿಲ್ಲ. ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಡಲಿಲ್ಲವಾದರೆ ಆತನೆ ಸೇವೆಯೇ ಅರ್ಥವಿಲ್ಲದಂತಿದೆ *(1 ಕೊರಿಂಥ 15:14–17).*

ಕೋಟೆಯೊಳಗೆ ಕೂಡಿಹಾಕಿದ್ದ ಪೌಲನು ಆ ರಾತ್ರಿಯಲ್ಲಿ ಕರ್ತನು ಕಾಣಿಸಿಕೊಂಡು "ಧೈರ್ಯದಿಂದಿರು ನೀನು ಯೆರೂಸಲೇಮಿನಲ್ಲಿ ನನ್ನ ಸಂಗತಿಯನ್ನೆಲ್ಲ ಸಾಕ್ಷಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿ ಹೇಳಬೇಕಾಗುವುದು ಅಂದನು" *(ಅ.ಕೃ. 23:11).* ಬಹುಕಾಲದಿಂದ ಅಪೇಕ್ಷಿಸಿದ್ದ ಕನಸು, ನಾನು ರೋಮಾಪುರದಲ್ಲಿ ತಿಳಿಸಬೇಕು ಎಂಬಂತದ್ದು ಈಗ ಅರ್ಥಪೂರ್ಣವಾಗತೊಡಗಿತು. ಮತ್ತು ಕರ್ತನ ಮಾತು ಆತನಲ್ಲಿ ಧೈರ್ಯವನ್ನು ತುಂಬಿತು. *(ಅ.ಕೃ. 19:21, ರೋಮಾಪುರದವರಿಗೆ 1:13–15; 15:22–29).*

**ಗುರುವಾರ** **ಸೆಪ್ಟೆಂಬರ್, 13**

## ಕೈಸೆಗೆ ನ್ಯಾಯಬದ್ಧವಾಗಿ ವರ್ಗಾವಣೆ

ತಲೆಕೆಟ್ಟೋಗಿರ ಜನ ಇನ್ನು ಪೌಲನನ್ನು ಸರಿಯಾಗಿ ಸಿಕ್ಕಲಿಲ್ಲದ ಕಾರಣದಿಂದ, ಒಂದು ಗುಂಪು ಪೌಲನನ್ನು ಬೆಳಗಾಗುವಷ್ಟರಲ್ಲಿ ಕೊಲ್ಲುವುದಕ್ಕೆ ಸಂಚು ಹೂಡಿದರು. ಓದಿರಿ

**ಅ.ಕೃ. 23:12–17 ಜನರ ಯೋಜನೆ ಏನಾಗಿತ್ತು ಮತ್ತು ಅದನ್ನು ಹೇಗೆ ಅಡ್ಡಿ ಪಡಿಸಲಾಯಿತು? ಸಮಸ್ಯೆಗಳನ್ನುಂಟು ಮಾಡುವವರ ಬಗ್ಗೆ ನಮಗೆ ಏನೂ ತಿಳಿಸುತದೆ?**

ಸುಮಾರು ನಲವತ್ತು ಮಂದಿ ಯೆಹೂದಿಗಳು ಸೇರಿಕೊಂಡು ಪೌಲನನ್ನು ಬೆಳಗಾಗುವಷ್ಟರಲ್ಲಿ ಕೊಲ್ಲಬೇಕೆಂದು ಶಪಥವನ್ನು ಮಾಡಿಕೊಂಡರು. ಅಪೋಸ್ತಲನಿಗೆ ಎಷ್ಟು ವಿರೋಧವಿತ್ತೆಂದು ತಿಳಿದುಬರುತ್ತದೆ. ಲೂಕನು ಈ ಮಂದಿ ಯಾರೆಂದು ಗುರುತಿಸಿಲ್ಲ. ಯೆಹೂದಿಗಳ ನಂಬಿಕೆಗೆ ವಿರುದ್ಧವಾಗಿರುವವನ್ನು ಹಾಳು ಮಾಡಲು ಮತ್ತು ಧಾರ್ಮಿಕ ಸುಧಾರಣೆಗಳ ಕಾರ್ಯ ಹಾಗೂ ರಾಷ್ಟ್ರೀಯತೆಯೆಂಬ ಅಭಿಮಾನ ಮೊದಲನೆಯ ಶತಮಾನದಲ್ಲಿ ಇರುವುದು ಅಸಾಮಾನ್ಯವಾದದ್ದೇನಲ್ಲ.

ಹೇಗೋ ಪೌಲನನ್ನು ಕೊಲ್ಲುವ ಯೋಜನೆ ಆತನ ಸಂಬಂಧಿಗೆ ತಿಳಿಯಿತು. ನಿರಾಶೆಯಾಗುವ ಒಂದು ವಿಷಯವೇನೆಂದರೆ ಪೌಲನ ಕುಟುಂಬದ ಬಗ್ಗೆ ಹೆಚ್ಚು ವಿವರಗಳು ಇರುವುದಿಲ್ಲ. ಆದರೂ ಆತನು ಮತ್ತು ಆತನ ಸಹೋದರಿ ಯೆರೂಸಲೇಮಿಗೆ ಬಂದಿದ್ದರು. *(ಅ.ಕೃ. 22:3).* ಅಲ್ಲಿ ಆಕೆ ಮದುವೆಯಾಗಿ ಒಂದು ಗಂಡು ಮಗುವನ್ನು ಪಡೆದಳು.

**ಅಧ್ಯಯನ ಮಾಡಿ – ಅ.ಕೃ. 23:26–30)ದೇಶಾಧಿಪತಿಯಾದ ಫೇಲಿಕ್ಸ, ಕ್ಲಾದ್ಯ ಲೂಸ್ಯನಿಗೆ ಪೌಲನ ಬಗ್ಗೆ ತಿಳಿದ್ದೇನು?**

________________________________________________________

________________________________________________________

ಫೆಲಿಕ್ಸಗೆ ತಲುಪಿದ ಪತ್ರವು ಉತ್ತಮವಾದ ವರದಿಯನ್ನು ಸಲ್ಲಿಸಿತ್ತು. ಪೌಲನು ರೊಮನ್ ಮೂಲ ನಿವಾಸಿಯಾಗಿರುವುದು ಆತನಿಗೆ ಸಹಾಯವಾಯಿತು. ರೋಮನ್‌ರ ಮೂಲ ನಿವಾಸಿಗಳಿಗೆ ಅವರ ಶಾಸಾನುಸಾರವಾಗಿ ಸುರಕ್ಷತೆಯನ್ನು ಕೊಡುತ್ತಿತ್ತು. ಉದಾಹರಣೆಗಾಗಿ, ನ್ಯಾಯಬದ್ದವಾದ ವಿಚಾರಣೆಗೊಳಗಾಗುತ್ತಿದ್ದರು. ನ್ಯಾಯಾಲಯದಲ್ಲಿ ಅವರನ್ನು ಕಾಪಾಡುತ್ತಿದ್ದರು *(ಅ.ಕೃ. 25:16)* ಒಂದು ಪಕ್ಷ ಅವರಿಗೆ ಅನ್ಯಾಯದ ವಿಚಾರಣೆಯಾದರೆ ಮತ್ತೆ ದೇಶಾಧಿಪತಿ ಹತ್ತಿರ ನ್ಯಾಯಕ್ಕಾಗಿ ಮೊರೆಹೊಕ್ಕಬಹುದಿತ್ತು. *(ಅ.ಕೃ. 25:10,11)*

ಫೆಲಿಕ್ಸ್‌ರವರು ಪೌಲನನ್ನು ಅಂತ್ಯಂತ ನ್ಯಾಯಯುತವಾಗಿ ಕಾಣುತ್ತಿದ್ದರು. ಪಿರ್ಯಾದಿ ಮಾಡಿದವರು ಅಥವಾ ಅಪರಾಧ ಹೊರೆಸಿರುವವರು ಬರುವ ತನಕ ಸಾದಾರಣವಾಗಿ ಪ್ರಶ್ನೆಗಳಿಗೊಳಮಾಡಿದರು.

**ಪೌಲನ ಜೀವಿತದಲ್ಲಿ ದೇವರು ಒದಗಿಸಿ ಕೊಡುವಂತದ್ದನ್ನು ಚಿಂತಿಸಿ, ನಿಮ್ಮ ಸ್ವಂತ ಜೀವಿತದಲ್ಲಿ ದೇವರು ಒದಗಿಸಿಕೊಟ್ಟಿರುದನ್ನು ಕಷ್ಟ ಸಂಕಟಗಳ ಮದ್ಯದಲ್ಲಿ ನೀವು ದೃಡಪಡಿಸಿಕೊಳ್ಳಿವಿರೋ?**

**ಶುಕ್ರವಾರ** ಸೆಪ್ಟೆಂಬರ್ 14

**ಹೆಚ್ಚಿನ ಚಿಂತನೆಗಾಗಿ:** ಈ ಸಂದರ್ಭದಲ್ಲಿ ಪೌಲನು ಮತ್ತು ತನ್ನ ಸಂಗಡಿಗರೊಂದಿಗೆ ಯೆರೂಸಲೇಮಿನಲ್ಲಿ ಒಬ್ಬ ನಾಯಕನನ್ನು ಗುರಿತಿಸಿದರು, ಅನ್ಯ ಸಭೆಯವರಿಂದ ಕೂಡಿಸಿಟ್ಟ ದೇಣಿಗೆಯನ್ನು ಯೆರೂಸಲೇಮಿನ ಬಡ ಯೆಹೂದ್ಯ ಜನರಿಗೆ ಕೊಡುವುದಕ್ಕಾಗಿ ಕಳುಹಿಸಿದರು.

"ಮನಪೂರ್ವಕವಾದ ಕಾಣಿಕೆಗಳನ್ನು ಅನ್ಯಜನರಿಂದ ಕೂಡಿಸಿದ ಹಣ ದೇವರ ಸೇವೆಯು ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸಾರುವ ಉದ್ದೇಶದಿಂದ ಪೌಲನು ಮತ್ತು ಆತನ ಸಂಗಡಿಗರಿಂದ ಮಾಡಿದ ಈ ಕಾರ್ಯಕ್ಕೆ, ತಮ್ಮಲ್ಲೆ ಕೆಲವರು ಈ ಸಹೋದರ ಪ್ರೀತಿಯನ್ನು ಮೆಚ್ಚದಿದ್ದರು". **ಎಲೆನ್ ಜಿ ವೈಟ್, *ದಿ ಆಕ್ಟ್ಸ್ ಆಫ್ ದಿ ಅಪೊಸ್ತಲ್ಸ್;* ಪುಟ 399, 400.**

ಅಪೊಸ್ತಲರು ಮಾಡುವ ಔದಾರ್ಯದ ಕಾರ್ಯಕ್ಕೆ ಸಭಾ ನಾಯಕರು ತಮ್ಮ ಅನುಕಂಪವನ್ನು ವ್ಯಕ್ತ ಪಡಿಸಿ ಇವರು ದೇವರಿಂದ ಕರೆಯಲ್ಪಟ್ಟಿರುವರೆಂದು ತಿಳಿದಿದ್ದೆ ಆಗಿದ್ದರೆ, ದೇವರು ಅವರನ್ನು ಬಿಟ್ಟುಬಿಡುತ್ತಿದ್ದನು. ಪೌಲನು ಕೆಲಸವು ಇಷ್ಟು ಬೇಗನೆ ಮುಕ್ತಾಯವಾಗಬೇಕೆಂದು ದೇವರು ಪ್ರತಿಷ್ಟಿರಲಿಲ್ಲ. ಯೆರೂಸಲೇಮಿನಲ್ಲಿ ಎದ್ದಿರುವ ಸನ್ನಿವೇಷವನ್ನು ತಡೆಯಲು ದೇವರು ಒಂದು ಅದ್ಭುತವನ್ನು ಮಾಡಲಿಲ್ಲ.

"ಅದೇ ಆತ್ಮ, ಅದೇಪಲಿತಾಂಶವನ್ನು ಪಡೆಯುತ್ತಿದೆ. ದೇವರಿಂದ ಒದಗಿ ಬರುವ ಅನೇಕ ಆಶೀರ್ವಾದಗಳನ್ನು ಇಂತಹ ನಿರ್ಲಕ್ಷತನದಿಂದ ಸಭೆಯು ಕಳೆದುಕೊಂಡಿದೆ. ಪ್ರಾಮಾಣಿಕವಾಗಿ ಸೇವೆ ಮಾಡುವವರ ಕೆಲಸವು ಎಷ್ಟೋ ಸಾರಿ

ಹಿಂದೆ ಹೋಗಿದೆ. ಕ್ರಿಸ್ತನ ಸೇವೆಯು ಮುಂದುವರಿಯಬಾರದೆಂದು ನಮ್ಮ ಆತ್ಮ ವಿರೋಧಿಯನ್ನು ಸಭೆಯವರು ಪ್ರೋತ್ಸಾಹಿಸಿರುವುದರಿಂದ ಅವರು ಸತ್ಯ ತಿಳುವಳಿಕೆಯನ್ನು ಅಪಾರ್ಥ ಮತ್ತು ತಪ್ಪು ಭಾವನೆಗಳಿಂದ ದೇವರ ಸೇವೆ ಹಿಂದೆ ಹೋಗುವಂತದ್ದಾಗಿದೆ, ಮತ್ತು ಆತನ ಆಶೀರ್ವಾದಗಳನ್ನು ಕಳೆದುಕೊಳ್ಳುವಂತರಾಗಿದ್ದಾರೆ"...

ಮಿಡಿತವಿಲ್ಲದ ಎದೆಯ ಮೇಲೆ ಕೈಕಟ್ಟಿಕೊಂಡು ಎಚ್ಚರಿಕೆ ಹಾಗೂ ಬಲಪಡಿಸುವಂತ ಸ್ವರವು ನಿಶಬ್ದವಾಗಿದೆ, ಅವರ ಸಾವು ಆತನ ಆಶೀರ್ವಾದದ ಬಹುಮಾನವನ್ನು ಕಾಣದೆ ಹೊಗಿದ್ದಾರೆ. –ಪುಟ 417, 418

**ಚರ್ಚಿಸಬೇಕಾದ ಪ್ರಶ್ನೆಗಳು:**

1. **ಪೌಲನು ತನ್ನ ಸ್ವಂತ ಹಿತವನ್ನು ಬಿಟ್ಟು, ಸಭೆಯ ಹಿತವನ್ನು ಇಟ್ಟುಕೊಂಡು, ಆತನಿಗೆ ಯರೂಸಲೇಮಿನಲ್ಲಿ ಸ್ವಾಗತವಿಲ್ಲದಿದ್ದರು ಎಷ್ಟು ಮಟ್ಟಿಗೆ ಪೌಲನ ಉದಾಹರಣೆಯನ್ನು ಅನುಸರಿಸಬಹುದು?**

2. **ಪೌಲನು ಯೆರೂಸಲೇಮಿನಲ್ಲಿ ಹೊಂದಿಕೊಂಡಿರುವುದರಿಂದ ನಾವು ಕಲಿಯುವುದೇನು? ನಮ್ಮ ನಂಬಿಕೆಗಳನ್ನು ಹಿಡಿದುಕೊಂಡವರಾಗಿ ರಾಜಕಿಯವಾಗಿ ನಾವು ಹೇಗೆ ನಿಶ್ಚಳವಾಗಿರಬಹುದು?**

3. **ಸಭೆಯ ಅನ್ಯೂನ್ಯತೆ ಬಹಳ ಮುಖ್ಯ. ವಿಭಿನ್ನಗಳ ಮದ್ಯದಲ್ಲಿ ಅನ್ಯೂನ್ಯವಾಗಿ ನಾವು ಹೇಗೆ ಕೆಲಸ ಮಾಡಬಹುದು?**